ಮಾಡಬೇಕು ಎಂಬ ಬಗ್ಗೆ ನಾವೆಲ್ಲ ಕುಳಿತು ಮಾತನಾಡೋಣ, ಹಣಕಾಸು ಸಚಿವರು ಇದ್ದಾರೆ. ಈಗಾಗಲೆ ಈ ಬಗ್ಗೆ ಶಿಕ್ಷಕರ ಕ್ಷೇತ್ರದ ಶಾಸಕರ ಹಾಗೂ ಅಧಿಕಾರಿಗಳ ಜೊತೆ ಎರಡು ಸಭೆಗಳು ಆಗಿದೆ. ಇಂದು ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಇಲ್ಲಿಯವರೆಗೆ ನಾನು ಅಧಿಕಾರಿಗಳ ಜೊತೆ ಸಮಸ್ಯೆಯ ಬಗ್ಗೆ ಚರ್ಚೆಮಾಡಿದ್ದೆನೆ. ಶಿಕ್ಷಕರ ಸಂಘದವರನ್ನು ಇಂದು ಸಂಜೆ ನಾಲ್ಕು ಗಂಟೆಗೆ ಚರ್ಚೆ ಮಾಡಲು ಆಹ್ವಾನಿಸಿದ್ದೇನೆ. ಇವರ ಬೇಡಿಕೆ ಈಡೇರಿಸಲು ಬಹಳ ಆರ್ಥಿಕ ಹೊರೆಯನ್ನು ಹೊರಬೇಕಾಗುತ್ತದೆ. ಒಂದೆರಡು ಕೋಟಿಗಳಲ್ಲ. ಅವರು ಕೇಳಿದ್ದನ್ನೆಲ್ಲ ಮಾಡಲು ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಬಹಳಷ್ಟು ಆರ್ಥಿಕ ಹೊರೆ ಬರುವುದರಿಂದ ಧೀರ್ಘವಾಗಿ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅವರುಗಳು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈಗಲೇ ತೀರ್ಮಾನ ತೆಗೆದುಕೊಂಡು ಹೇಳತಕ್ಕ ಪರಿಸ್ಥಿತಿಯಲ್ಲಿ ಇಲ್ಲದಿರುವುದರಿಂದ ಸ್ವಲ್ಪ ತಡವಾಗಿದೆ. ಐವತ್ತು ಸಾವಿರ ಶಾಲೆಗಳನ್ನು ಮುಚ್ಚಿರುವುದು ನಿಜ. ಎರಡು ಲಕ್ಷದ ನಲವತ್ತು ಸಾವಿರ ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗದಿರುವುದು ನಿಜ. ಇಲ್ಲಿ ಎಲ್ಲರೂ ಸಾಮೂಹಿಕವಾಗಿ ಯೋಚನೆ ಮಾಡುವ ಪರಿಸ್ಥಿತಿ ಉದ್ಭವವಾಗಿದೆ. ಕೂಡಲೇ ಏನು ಮಾಡಲು ಆಗದಿದ್ದರೂ ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೇವೆ. ಇಂದು ಸಂಜೆ ಅವರುಗಳನ್ನು ಕರೆಸಿ ಈ ರೀತಿ ಮಾಡಲು ಸಾಧ್ಯವಿಲ್ಲವೆಂಬ ಬಗ್ಗೆ ಅವರ ಜೊತೆ ಚರ್ಚೆ ಮಾಡಿ ತಮಗೆ ತಿಳಿಸುತ್ತೇನೆ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ದಯವಿಟ್ಟು ಎಲ್ಲಾ ಉಪಾಧ್ಯಾಯರುಗಳು ತಮ್ಮ ತಮ್ಮ ಕೆಲಸಕ್ಕೆ ಹಾಜರಾಗತಕ್ಕ ರೀತಿಯಲ್ಲಿ ಆದೇಶ ಕೊಡಬೇಕು. ಮಕ್ಕಳ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಅವರೂ ಜವಾಬ್ದಾರಿ ಸ್ಥಾನದಲ್ಲಿ ಇರುವುದರಿಂದ ಎಲ್ಲ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಂಡು ಎಲ್ಲ ಉಪಾಧ್ಯಾಯರುಗಳು ನಾಳೆಯಿಂದ ಶಾಲೆಗೆ ಹೋಗತಕ್ಕ ಕಾರ್ಯಕ್ರಮ ಮಾಡಬೇಕು ಎಂದು ಈ ಶಾಸನ ಸಭೆಯ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕ) ರಾಷ್ಟ್ರೀಯ ಕ್ರೀಡಾಕೂಟಗಳು ಮುಗಿದಿದ್ದರೂ ಗುತ್ತಿಗೆದಾರರಿಗೆ ಕೊಡಬೇಕಾದ ಹಣ ಕೊಡದೇ ಇರುವುದು.

ಶ್ರೀ ಜಿ.ಬಿ.ಶಿವಕುಮಾರ್ (ಕೆರಗೋಡು): ಮಾನ್ಯ ಅಧ್ಯಕ್ಷರೆ, ಎರಡು ರಾಷ್ಟ್ರೀಯ ಕ್ರೀಡಾಕೂಟಗಳು ಮುಗಿದಿದ್ದರೂ, ಬೆಂಗಳೂರು ನಗರದಲ್ಲಿ ನಿರ್ಮಾಣ ಮಾಡಿರುವ ಕಟ್ಟಡದ ಗುತ್ತಿಗೆದಾರರಿಗೆ ಯೋಜನಾ ಇಲಾಖೆಯಿಂದ ಕೋಟ್ಯಾಂತರ ರೂಪಾಯಿಗಳು ಬಾಕಿ ಬರಬೇಕಾಗಿದ್ದು, ಆ ಗುತ್ತಿಗೆದಾರರು ತೊಂದರೆಗೊಳಗಾಗಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಆರ್ಬಿಟ್ರೇಷನ್

ಮೂಲಕವೇನಾದರೂ ಅವರು ಕ್ಲೇಮು ಮಾಡುವ ಅವಕಾಶ ತೆಗೆದುಕೊಂಡರೆ, ಒಂದಕ್ಕೆ ಹತ್ತು ಪಟ್ಟು ಕೊಡಬೇಕಾದ ಪರಿಸ್ಥಿತಿ ಸರ್ಕಾರಕ್ಕೆ ಬರುವುದನ್ನು ತಪ್ಪಿಸಲು ಯೋಜನಾ ಇಲಾಖೆ ಸಚಿವರು ಸಂಬಂಧಪಟ್ಟಂಥ ಗುತ್ತಿಗೆದಾರರನ್ನು ಕರೆಸಿ, ಅವರಿಗೆ ನ್ಯಾಯಯುತವಾಗಿ ಕೊಡಬೇಕಾದ ಹಣವನ್ನು ಪಾವತಿ ಮಾಡಬೇಕೆಂದು ಕೇಳುತ್ತೇನೆ. ಮಾನ್ಯ ಸಚಿವರು ಈ ಬಗ್ಗೆ ವಿವರಣೆ ನೀಡಬೇಕೆಂದು ಕೇಳಬಯಸುತ್ತೇನೆ. ಕಟ್ಟಡದ ನಿರ್ಮಾಣದ ಕೊನೆಯ ಹಂತದಲ್ಲಿ ಯಾರು ಎಂಪವರ್ ಕಮಿಟಿ ಅಧ್ಯಕ್ಷರು ಅರ್ಥಾತ್ ಪಿಡಬ್ಲ್ಯೂಡಿ ಕಾರ್ಯದರ್ಶಿ ಇದ್ದರೋ, ಅವರು ಆ ಗುತ್ತಿಗೆದಾರರಿಗೆ, ತುರ್ತು ಅಗತ್ಯ ಕೆಲಸಗಳನ್ನು ನೀವು ಹೆಚ್ಚಿನ ದರದಲ್ಲಿ ಮಾಡಿ, ಹಾಗೆ ಮಾಡಿದರೆ ನಾವು ಹಣ ಕೊಡುತ್ತೇವೆಂಬ ಕರಾರು ಮಾಡಿದ್ದು ಸತ್ಯವೆ? ಆ ತರಹವಾಗಿದ್ದರೆ, ಸರ್ಕಾರ ಅದರ ಬಗ್ಗೆ ಗಮನಕೊಟ್ಟಿದೆಯೇ? ಎಂಬುದರ ಬಗ್ಗೆ ನಾನು ಉತ್ತರ ನಿರೀಕ್ಷಿಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವೆ, ಕ್ರೀಡಾ ರಾಜ್ಯ ಮಂತ್ರಿ): ಮಾನ್ಯ ಶಿವಕುಮಾರ್‌ರವರು ಕೇಳಿರುವ ಪ್ರಶ್ನೆಗೆ ಸಂಬಂಧಿಸಿದಂತೆ, ನಾನು ಈ ಇಲಾಖೆಯನ್ನು ವಹಿಸಿಕೊಂಡ ನಂತರ, ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಕೆಲಸವನ್ನು ಮುಗಿಸಿ ಅನೇಕ ಗುತ್ತಿಗೆದಾರರ ಹಣ ಪಾವತಿಯಾಗದಿರುವ ಹಿನ್ನೆಲೆಯಲ್ಲಿ, ಕಡತಗಳನ್ನು ತರಿಸಿ, ಅವರಿಗೆ ನ್ಯಾಯಯುತವಾಗಿ ಬರಬೇಕಾದ ಹಣವನ್ನು ಪಾವತಿ ಮಾಡುವುದಕ್ಕೆ ಹಂತಹಂತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಅವಸರದಲ್ಲಿ ಕೆಲವು ಅಡಚಣೆಗಳಾಗಿವೆ ಎಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿರುವ ಎಂಪವರ್ ಕಮಿಟಿ ಅಧ್ಯಕ್ಷರು ಕ್ರೀಡಾ ಕೂಡವನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಅವಸರದಲ್ಲಿ ಮೌಖಿಕವಾದ ಒಂದು ಆದೇಶ ಕೊಟ್ಟಿದ್ದಾರೆ. ಆ ಆದೇಶದ ಮೇಲೆ ಕೆಲವು ಗುತ್ತಿಗೆದಾರರು ಕೆಲಸ ಮುಗಿಸಿದ್ದಾರೆ. ನನಗೆ ಸಿಕ್ಕಿರುವ ಕಡತದಲ್ಲಿ ಆ ಮೌಖಿಕ ಆದೇಶವನ್ನು ಯಾವ ರೀತಿಯಾಗಿ ಕೊಟ್ಟಿದ್ದಾರೆ ಅದಕ್ಕೇನಾದರೂ ಕಾಗದಪತ್ರಗಳು ಇವೆಯೇ ಎಂಬುದನ್ನು ಹುಡುಕಿಸಿ, ಅವರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ಹಣವನ್ನು ಪಾವತಿ ಮಾಡುವುದಕ್ಕೆ ಹಂತಹಂತವಾಗಿ ಪ್ರತಿಯೊಬ್ಬ ಗುತ್ತಿಗೆದಾರರ ಕಡತವನ್ನು ತರಿಸಿ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೇವೆ. ಶಿವಕುಮಾರ್‌ರವರು ಹೇಳಿದ ಹಾಗೆ, ಇದಕ್ಕೆ ಈಗಾಗಲೇ ಕ್ಯಾಬಿನೆಟ್‌ನಿಂದ ಸಹ ಸಮ್ಮತಿಯನ್ನು ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು: ಅವರು ನನ್ನ ಹತ್ತಿರ ಬಂದು, ಆ ಗುತ್ತಿಗೆದಾರರು ಮಂಡ್ಯದ ಇಂಜಿನಿಯರಿಂಗ್ ಕಾಲೇಜಿನಲ್ಲಿ ತಮ್ಮ ಜೊತೆ ಕ್ಲಾಸ್‌ಮೇಟ್ ಆಗಿದ್ದು, ಅವರೇ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ನನಗೆ ನಿರ್ಬಂಧವೆಂದು ಹೇಳಿದರು.

ಶ್ರೀ ಜಿ.ಬಿ.ಶಿವಕುಮಾರ್: ಅದು ಸತ್ಯ ಕೂಡ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಹಾಗೆಂದಾಕ್ಷಣ, ಅವರೊಬ್ಬರ

ಗುತ್ತಿಗೆದಾರರ ಹಣ ಪಾವತಿ ಮಾಡುವುದಕ್ಕಾಗುವುದಿಲ್ಲ. ಎಲ್ಲ ಗುತ್ತಿಗೆದಾರರನ್ನೂ ಗಮನಿಸಬೇಕಾಗುತ್ತದೆ.

ಅಧ್ಯಕ್ಷರು: ಹಾಗೆ ಮಾಡಿ ಎಂದು ನಾನು ಹೇಳಲಿಲ್ಲ. ಅವರೇಕೆ ವಿಷಯವನ್ನು ಪ್ರಸ್ತಾಪ ಮಾಡಿದರೆಂದು ಹೇಳಿದೆ. ನೀವು ಯಾವಾಗಲಾದರೂ ಮಾಡಿಕೊಳ್ಳಿ. ನಾನು ಅಡ್ಡ ಬರುವುದಿಲ್ಲ. ಅದು ನಿಮ್ಮ ಅನುಕೂಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಗುತ್ತಿಗೆದಾರರಿಗೆ ಸರ್ಕಾರದಿಂದ ನ್ಯಾಯಯುತವಾಗಿ ಏನು ಹಣ ಪಾವತಿಯಾಗಬೇಕೋ ಅದನ್ನು ಪಾವತಿ ಮಾಡಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಅಧ್ಯಕ್ಷರು: ನಿಮ್ಮ ಖುಷಿ

ಶ್ರೀ ಜಿ.ಬಿ.ಶಿವಕುಮಾರ್: ಆರ್ಬಿಟ್ರೇಷನ್ ಮೂಲಕವೇನಾದರೂ ಹೋದರೆ, ಸರ್ಕಾರ ಒಂದಕ್ಕೆ ಹತ್ತು ಪಟ್ಟು ಡೆಮರೇಜಸ್ ಬೀಳುತ್ತದೆಂದು ಅವರಿಗೆ ಗೊತ್ತು. ಅವರ ನ್ಯಾಯಯುತ ಬೇಡಿಕೆ ಈಡೇರಿಸಿ ಎಂದು ನಾನು ಕೇಳುತ್ತೇನೆ. ಮಂಡ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅವರು ನನ್ನ ಜೊತೆಯಲ್ಲಿ ಓದುತ್ತಿದ್ದರು.

ಅಧ್ಯಕ್ಷರು: ನೀವೇ ಹೇಳಿದರಲ್ಲ. ನನಗೇನು ಕನಸು ಬಿದ್ದಿತ್ತೆ? ಸರ್ಕಾರ ಮಾಡುವುದೆಲ್ಲವೂ ನ್ಯಾಯವಾಗಿಯೇ? ಹಂತಹಂತವಾಗಿ ಮಾಡುತ್ತಾರೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಆರ್ಬಿಟ್ರೇಷನ್‌ಗೆ ಹೋದರೆ ಸರ್ಕಾರಕ್ಕೆ ದೊಡ್ಡ ಹೊಣೆಯಾಗುತ್ತದೆಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಹಾಗಾಗದ ರೀತಿಯಲ್ಲಿ ಮಾಡುತ್ತೇನೆ.

ಅಧ್ಯಕ್ಷರು: ನಿಮ್ಮಲ್ಲಿ ವಿಶ್ವಾಸವಿದೆ, ನೀವು ಮಾಡಿ.

(ಖ) 1996-97ನೇ ಸಾಲಿನ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂ ಕುರಿತು.

ಶ್ರೀ ಕಾಗೋಡು ತಿಮ್ಮಪ್ಪ(ಸಾಗರ): ಹಣಕಾಸು ಸಚಿವರಲ್ಲಿ ನನ್ನ ವಿನಂತಿ ಇಷ್ಟೆ, 1996-97ನೇ ಸಾಲಿನಲ್ಲಿ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಮ್‌ಗೋಸ್ಕರ 8 ಕೋಟಿ 20 ಲಕ್ಷ ರೂಪಾಯಿಗಳನ್ನು ನಮ್ಮ ಪೂಲಿಂಗ್‌ಗೆ ತೆಗೆದುಕೊಳ್ಳಲಾಗಿತ್ತು. ಆದರೆ, ಅಲ್ಲಿ ಕ್ರಿಯಾಯೋಜನೆ ಮಂಜೂರಾಗಿ ಕೆಲಸವಾಗಿದೆ. ತಾವೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ, ಈ ವರ್ಷದ ಮಟ್ಟಿಗೆ ಮಲೆನಾಡು ಬೋರ್ಡಿನವರೆ ಅದನ್ನು ಕೊಟ್ಟು ಬಿಡಿ, ಹಣ ವಾಪಸ್ಸು ಕೊಟ್ಟುಬಿಡೋಣ ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ.